



# ಸ್ವರ್ಗದ ದಾರಿ

ಯೇಸು ಹೇಳಿದನು: ನಾನೇ (ಸ್ವರ್ಗದಲ್ಲಿರುವ) ತಂದೆ ಬಳಿಗೆ ಹೋಗುವ ದಾರಿಯಾಗಿದ್ದೇನೆ.
ನನ್ನ ಮೂಲಕ ಹೊರತಾಗಿ ಬೇರೆ ದಾರಿ ಇಲ್ಲ.

ಯೋಹಾನ 14:6

*Swargadha Dhari*
(Kannada)

The Way to Heaven
© Malaysia Faith Mission

First Kannada edition 1997
Reprint 2007

Acknowledgement:
All pictures are copies from the Revised English Text - 1990

Authentic Books is an imprint of Authentic India,
the publishing division of STL OM Books India.

Published by
Authentic Books
P. O. Box 2190
Secunderabad 500 003
Andhra Pradesh, India.

ನಿಮ ಗೆ "ಸ್ವರ್ಗದ ದಾರಿ"ಇದರ ಬಗ್ಗೆ ಹೆಚ್ಚಿನ ವಿವರಗಳು ಬೇಕಾದರೆ
ಕೆಳಗಿನ ವಿಳಾಸಿಕ್ಕೆ ಬರೆಯಿರಿ.

Jointly Published by
CCMI & OM India Secunderabad - 55.

## Contents:

**ದೇವರ ಪ್ರೀತಿ** - ಸ್ವರ್ಗ - ಪವಿತ್ರತೆ 4-5
ಯೋಹಾನ 3:16

**ಪಾಪ** - ಸ್ವರ್ಗದಲ್ಲಿ ಪ್ರವೇಶಿಸಲು ಸಾಧ್ಯವಿಲ್ಲ - ನರಕ 6-7
ರೋಮಾ 3:23

**ಕ್ರಿಸ್ತನು ಸತ್ತನು** - ಪಾಪವನ್ನು ಅರಿಕೆಮಾಡು ಮತ್ತು ಪಾಪವನ್ನು ತ್ಯಜಿಸಿ - ಕ್ಷಮೆಹೊಂದಿದಿ 8-11
1 ಕೊರಿಂಥ 15:3-4 1 ಯೋಹಾನ 1:9-7

**ಯೇಸುವನ್ನು ಅಂಗೀಕರಿಸು** - ನಿತ್ಯಜೀವ - ರಕ್ಷಣೆಹೊಂದಿದಿ 12-13
ಪ್ರಕಟನೆ 3:20

**ವೃದ್ಧಿಹೊಂದು** - ಸತ್ಯವೇದವನ್ನೋದುವುದು - ಪ್ರಾರ್ಥಿಸು ಸಭೆಗೆ - ಸೇರು - ವಿಧೇಯನಾಗು - ಸಾಕ್ಷಿಕೊಡು 14-17
2 ಪೇತ್ರ 3:18

ನಾವು ದೇವರಿಂದ ಸೃಷ್ಟಿಸಲ್ಪಟ್ಟಿದ್ದೇವೆ. ಆದಿಕಾಂಡ 1:27

ದೇವರು ನಮ್ಮನ್ನು ಪ್ರೀತಿಸುತ್ತಾನೆ.

ಯೋಹಾನ 3:16, ರೋಮಾ 5:8

## ಸತ್ಯವೇದ

### ಅಪರಿಮಿತವಾದ ಪ್ರೀತಿ

ದೇವರು ಲೋಕದ ಮೇಲೆ ಎಷ್ಟೋ
ಪ್ರೀತಿಯನ್ನಿಟ್ಟು ತನ್ನ ಒಬ್ಬನೇ
ಮಗನನ್ನು ಕೊಟ್ಟನು. ಆತನನ್ನು ನಂಬುವ
ಒಬ್ಬನಾದರೂ ನಾಶವಾಗದೆ ಎಲ್ಲರೂ
ನಿತ್ಯಜೀವವನ್ನು ಪಡೆಯಬೇಕೆಂದು
ಆತನನ್ನು ಕೊಟ್ಟನು


ಯೋಹಾನ 3:16

ನಾವು ಸ್ವರ್ಗಕ್ಕೆ ಸೇರಬೇಕೆಂಬುದೇ ದೇವರ ಬಯಕೆಯಾಗಿದೆ.

ನಾವು ಈ ಲೋಕವನ್ನು ಬಿಟ್ಟಮೇಲೆ 1 ತಿಮೊಥ 2:4



## ದೇವರ ಕುಮಾರನಾದ ಯೇಸುಕ್ರಿಸ್ತನು ನಮ್ಮನ್ನು ಪ್ರೀತಿಸುತ್ತಾನೆ.




ಆತನು ನಮ್ಮನ್ನು ಸಕಲ ಅಧರ್ಮದಿಂದ ವಿಮೋಚಿಸುವದಕ್ಕೆ ತನ್ನನ್ನು ತಾನೇ ಒಪ್ಪಿಸಿಕೊಟ್ಟನು.' ಎಫೆಸ 5:2, ತೀತ 2:14

ಬರಬೇಕಾದ ರಕ್ಷಣೆಯು (ಯೇಸುವನ್ನು ಹೊರತು) ಇನ್ನಾರಲ್ಲಿಯೂ ಸಿಕ್ಕುವದಿಲ್ಲ. ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲಾ. ಅ.ಕೃ - 4:12

## ಎಲ್ಲರು ಪಾಪಮಾಡಿ ದೇವರ ಮಹಿಮೆ (ಪವಿತ್ರತೆ) ಹೊಂದದೇ ಹೋಗಿದ್ದಾರೆ. ರೋಮಾ 3:23

ದೇವರ ಆಜ್ಞೆ ಉಲ್ಲಂಘಿಸುವದು ಪಾಪ 1 ಯೋಹಾನ 3:4

ಪಾಪವು ನಮ್ಮನ್ನು ಪವಿತ್ರ ದೇವರಿಂದ ಬೇರ್ಪಡಿಸುತ್ತದೆ. ಯೆಶಾಯ 59:1,2




## ಪಾಪಕೊಡುವ ಸಂಬಳ ಮರಣ;

ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತಯೇಸುವಿನಲ್ಲಿರುವ ನಿತ್ಯಜೀವ. ರೋಮಾ 6:23

ಪಾಪಕ್ಕೆ ಶಿಕ್ಷೆ ಬೆಂಕಿಯ ಕೆರೆ, ಇದು ಎರಡನೆಯ ಮರಣ (ನರಕ)

ಪ್ರಕಟನೆ 21:8, 20:11-15

ನಿತ್ಯ ಯಾತನೆ ಪಡುವ ಸ್ಥಳ. ಮತ್ತಾಯ 13:41, 42

# ಯೇಸು ಕ್ರಿಸ್ತನು ನಮ್ಮ ಪಾಪಗಳ ನಿಮಿತ್ತ ಸತ್ತನು

## ಮನುಷ್ಯನ ಸಮಸ್ಯೆ



### ಪಾಪಮಯವಾದ ಹೃದಯ

ಯಾವ ಪಾಪವೂ ದೇವರ ಪವಿತ್ರ ಸ್ವರ್ಗವನ್ನು ಪ್ರವೇಶಿಸುವುದು ಅಸಾಧ್ಯ (ಪ್ರಕಟನೆ 21:27). ನಮ್ಮ ಸ್ವಕ್ರಿಯೆಗಳಿಂದಾಗಲಿ ಒಳ್ಳೆಯತನದಿಂದಾಗಲಿ ಪಾಪವನ್ನು ತೆಗೆಯಲು ಸಾಧ್ಯವಿಲ್ಲ.

ಯೆಶಾಯ 64:6

ನಾವು ನಮ್ಮನ್ನು ರಕ್ಷಿಸಿಕೊಳ್ಳಲಾರೆವು. ತೀತ 3:5

ನಮಗಿರುವ ಆವಶ್ಯಕತೆ ಏನೆಂದರೆ ಜಗತ್ತಿಗೆ ರಕ್ಷಕನಾದ ಕ್ರಿಸ್ತ ಯೇಸು ನಮ್ಮನ್ನು ದೇವರ ಬಳಿಗೆ ಸೇರಿಸಲು ಸಮರ್ಥನಾಗಿದ್ದಾನೆ 1 ಪೇತ್ರ 3:18

ಏಕೆಂದರೆ ದೇವರು ಒಬ್ಬನೇ ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ. ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೆ, ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಕೊಟ್ಟನು. 1 ತಿಮೊಥೆ 2:5,6


ಪಾಪಗಳನ್ನು ಹೋಗಲಾಡಿಸುವುದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನು ಆತನಲ್ಲಿ ಪಾಪವಿಲ್ಲ.

1 ಯೋಹಾನ 3:5



## ಪಾಪಕ್ಕೆ ಬರಬೇಕಾದ ಶಿಕ್ಷೆಯಿಂದ ನಮ್ಮನ್ನು ವಿಮೋಚಿಸಲು ಯೇಸು ಸ್ವಇಚ್ಛೆಯಿಂದ ನಮಗೋಸ್ಕರ ಸತ್ತನು

ಯೋಹಾನ 10:11, 18



ನಾವು ಮಾಡಿದ ಪಾಪಗಳಿಗೋಸ್ಕರ ಶಿಕ್ಷೆಯನ್ನು ಅನುಭವಿಸುವುದು ನ್ಯಾಯವೇ

ಪಾಪರಹಿತನಾದ ಯೇಸು ನಮ್ಮ ಪಾಪಕ್ಕೆ ಬರಬೇಕಾದ ಶಿಕ್ಷೆಯನ್ನು ತಾನೇ ಹೊತ್ತನು. 2 ಕೊರಿಂಥ 5:21

ನಮ್ಮನ್ನು ದೇವರ ಬಳಿಗೆ ಸೇರಿಸುವದಕ್ಕಾಗಿ ಕ್ರಿಸ್ತನು ನೀತಿವಂತನಾಗಿದ್ದು ಎಲ್ಲಾ ಅನೀತಿವಂತರಿಗೋಸ್ಕರ ಸತ್ತನು. ಆತನು ಶರೀರ ಸಂಬಂಧದಲ್ಲಿ ಸತ್ತನು. ಆತ್ಮ ಸಂಬಂಧದಲ್ಲಿ ತಿರುಗಿ ಬದುಕುವವನಾದನು.

1 ಪೇತ್ರ 3:18

ದೇವರು ನಮ್ಮೆಲ್ಲರ ದೋಷ ಫಲವನ್ನು ಆತನ (ಯೇಸುವಿನ) ಮೇಲೆ ಹಾಕಿದನು.


ಯೆಶಾಯ 53:6, 1 ಪೇತ್ರ 2:24

ಆತನು ಹೂಣಲ್ಪಟ್ಟನು

ಮೂರನೆಯ ದಿನದಲ್ಲಿ ಆತನು ತಿರುಗಿ ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು

1 ಕೊರಿಂಥ 15:3, 4.

## ಯೇಸು ತಿರುಗಿ ಜೀವಿತನಾದನು.



ಶಾಸ್ತ್ರದ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು ... ಹೂಣಲ್ಪಟ್ಟನು. ಶಾಸ್ತ್ರದ ಪ್ರಕಾರ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು. ಆತನು ಕೇಫನಿಗೂ ಆಮೇಲೆ ಹನ್ನೆರಡು ಮಂದಿ ಅಪೊಸ್ತಲರಿಗೂ ಕಾಣಿಸಿಕೊಂಡನು. ತರುವಾಯ ಒಂದೇ ಸಮಯದಲ್ಲಿ ಐದುನೂರು ಜನರಿಗೆ ಕಾಣಿಸಿಕೊಂಡನು 1 ಕೊರಿಂಥ 15:3-6

ಪುನರುತ್ಥಾನದ ನಂತರ ಹತ್ತು ಸಾರಿ ಬೇರೆ ಬೇರೆ ಕಡೆಯಲ್ಲಿ ಕ್ರಿಸ್ತನು ಅನೇಕರಿಗೆ ದರ್ಶನ ಕೊಟ್ಟನು ನಾಲ್ವತ್ತನೆಯ ದಿನ ಸ್ವರ್ಗಕ್ಕೆ ತಿರುಗಿ ಹೋದನು. ಅ ಕೃ 1:3

ಯೋಹಾನ 14:3ರಲ್ಲಿ ಯೇಸು ವಾಗ್ದಾನ ಮಾಡಿದ್ದಾನೆ

## ನಾನು ತಿರುಗಿ ಬರುತ್ತೇನೆ


ಯೇಸುವಿನಲ್ಲಿ ವಿಶ್ವಾಸವಿಟ್ಟು ಪ್ರತಿಯೊಬ್ಬರು ಶರೀರ ಸಂಬಂಧವಾಗಿ ಸತ್ತರು. ಯೇಸು ಕ್ರಿಸ್ತನು ಎರಡನೆಯ ಸಾರಿ ಬಂದಾಗ ಆತ್ಮ ಸಂಬಂಧವಾಗಿ ಅನಂತ ಕಾಲದವರೆಗೆ ಜೀವಿಸುವರು.

ಯೋಹಾನ 11:24-26, ಇಬ್ರಿ 9:28

# ಸಮಸ್ತ ಜನರೆಲ್ಲರು ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ದೇವರು ಅಪ್ಪಣೆ ಕೊಡುತ್ತಾನೆ!

ಅ.ಕೃ. 17:30

**ನಿನ್ನ ಎಲ್ಲಾ ಪಾಪಗಳನ್ನು ಅರಿಕೆಮಾಡು**




**ದೇವರ ಕಡೆಗೆ ತಿರುಗು**




ನಿನ್ನ ಹೃದಯದ ಎಲ್ಲಾ ಪಾಪಗಳನ್ನು ತನ್ನ ಪರಿಶುದ್ಧ ರಕ್ತದಿಂದ ತೊಳೆಯಲು ಯೇಸುವನ್ನು ಬೇಡಿಕೊಳ್ಳು.

ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿ ಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಮಾಡುವನು. 1 ಯೋಹಾನ 1:9

ದೇವರ ಮಗನಾದ ಯೇಸು ಕ್ರಿಸ್ತನ ರಕ್ತವು ನಮ್ಮನ್ನು ಸಕಲ ಪಾಪಗಳಿಂದ ಶುದ್ಧಮಾಡುತ್ತದೆ. 1 ಯೋಹಾನ 1:7 ಪ್ರಕಟನೆ 1:5

ರಕ್ತಧಾರೆಯಿಲ್ಲದೆ ಪಾಪ ಪರಿಹಾರ ಉಂಟಾಗುವದಿಲ್ಲ. ಇಬ್ರಿ 9:22

## ನಿನ್ನ ಪಾಪಗಳನ್ನು ತ್ಯಜಿಸು

ದುಷ್ಟನು ತನ್ನ ದುರ್ಮಾರ್ಗವನ್ನು ಬಿಡಲಿ ಕೆಟ್ಟವನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ. ಅವನು ದೇವರ ಕಡೆಗೆ ತಿರುಗಿಕೊಂಡು ಬರಲಿ. ಆಗ ಆತನು ಅವನನ್ನು ಕರುಣಿಸುವನು. ಆತನು ಉಚಿತವಾಗಿ ಕ್ಷಮಿಸುವನು. ಯೆಶಾಯ 55:7

ತನ್ನ ದೋಷಗಳನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗುವದಿಲ್ಲ. ಅವುಗಳನ್ನು ಒಪ್ಪಿಕೊಂಡು ಬಿಟ್ಟುಬಿಡುವವನಿಗೆ ಕರುಣೆ ದೊರೆಯುವದು. ಜ್ಞಾ.ನೋ 28:13



ಯೇಸು ನುಡಿದನು:

ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ (ನರಕಕ್ಕೆ) ಲೂಕ 13:3-5

**ಪಶ್ಚಾತಾಪ** ಅಂದರೆ

1. ನಿಮ್ಮ ಪಾಪಗಳಿಗೆ ದುಃಖ ಪಡುವದು II ಕೊರಿಂಥ 7:10
2. ನಿಮ್ಮ ಪಾಪಗಳನ್ನು ಅರಿಕೆಮಾಡುವದು 1 ಯೋಹಾನ 1:9
3. ದೇವರ ಕಡೆಗೆ ತಿರುಗಿಕೊಳ್ಳುವದು ಯೆಶಾಯ 55:7
4. ಪಾಪ ಮಾಡುವದನ್ನು ಬಿಟ್ಟು ಬಿಡುವದು ಜ್ಞಾನೋಕ್ತಿ 28:13

**ಆಗ**

ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ಶುದ್ಧಿ ಮಾಡುತ್ತದೆ 1 ಯೋಹಾನ 1:7, 9



**ಒಂದು ಶುದ್ಧ ಹೃದಯ**

ಸತ್ಯವೇದ ಹೇಳುವದೇನೆಂದರೆ ಯಾರು ಪಶ್ಚಾತಾಪ ಪಟ್ಟು ದೇವರ ಕಡೆಗೆ ತಿರುಗಿಕೊಂಡು ಕರ್ತನಾದ ಯೇಸುಕ್ರಿಸ್ತನಲ್ಲಿ ನಂಬಿಕೆ ಇಡುವರೋ ಅವರಿಗೆ ದೇವರು - ನಿತ್ಯಜೀವವನ್ನು ಕೊಡುವನು. ಅ.ಕೃ. 20:21

# ಯೇಸು ನಿಮ್ಮ ಹೃದಯದ ಬಾಗಿಲನ್ನು ತಟ್ಟುತ್ತಾ ಇದ್ದಾನೆ. ಯೇಸು ನಿನ್ನ ಹೃದಯ ಮತ್ತು ಜೀವನದಲ್ಲಿ ಬರಲು ಇಚ್ಛಿಸುತ್ತಾನೆ

ಪ್ರಕಟನೆ 3:20

### ಯೇಸು ನಮ್ಮ ಹೃದಯದ ಬಾಗಿಲನ್ನು ತಟ್ಟುತ್ತಾ ಇದ್ದಾನೆ.



ಯೇಸು ನುಡಿದನು:

"ಇಗೋ ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದಾನೆ. ಯಾವನಾದರೂ ನನ್ನ ಸ್ವರವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬರುತ್ತೇನೆ. ಪ್ರಕಟನೆ 3:20

### ಆತನನ್ನು ಆಮಂತ್ರಿಸು

ಯೇಸುವನ್ನು ನಿನ್ನ ಹೃದಯದಲ್ಲಿ ಬಂದು ನಿನ್ನ ಜೀವನವನ್ನು ನಿಯಂತ್ರಿಸಲು ಬೇಡಿಕೊಳ್ಳು

### ಮಾದರಿ ಪ್ರಾರ್ಥನೆ

ಕರ್ತನಾದ ದೇವರೇ ನನ್ನ ಎಲ್ಲಾ ಪಾಪಗಳನ್ನು ಕ್ಷಮಿಸು ಮತ್ತು ನನ್ನ ಹೃದಯದಲ್ಲಿನ ಪ್ರತಿಯೊಂದು ಪಾಪವನ್ನು ಶುದ್ಧಗೊಳಿಸು. ಕರ್ತನಾದ ಯೇಸುವೇ ನನ್ನ ಹೃದಯದಲ್ಲಿ ಬಂದು ನನ್ನ ಜೀವನವನ್ನು ನಿಯಂತ್ರಿಸು. ನಿನಗೆ ಉಪಕಾರ

### ಆಮೇಲೆ ನಂಬು

ದೇವರ ವಾಗ್ದಾನವೇನೆಂದರೆ ಆತನು ನಿಮ್ಮನ್ನು ಕ್ಷಮಿಸುವನು ಮತ್ತು ನಿಮ್ಮ ಹೃದಯದ ಎಲ್ಲಾ ಪಾಪಗಳಿಂದ ಶುದ್ಧ ಮಾಡುವನು (1 ಯೋಹಾನ 1:9) ಆತನ ಆತ್ಮನು ನಿನ್ನ ಹೃದಯ ಮತ್ತು ಜೀವನದಲ್ಲಿ ಬಂದು ನೆಲಸಿದ್ದಾನೆ ಎಂದು ನಂಬು. ಪ್ರಕಟನೆ 3:20

ದೇವರ ವಾಗ್ದಾನ: ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ ಮತ್ತು ಎಂದಿಗೂ ತೊರೆಯುವದಿಲ್ಲಾ. ಇಬ್ರಿ 13:5. ನಾವು ದೇವರ ವಾಗ್ದಾನಗಳನ್ನು ಸಂಪೂರ್ಣವಾಗಿ ನಂಬುವದಕ್ಕೆ ಯೋಗ್ಯವಾದದ್ದಾಗಿದೆ. ಏಕೆಂದರೆ ದೇವರಿಗೆ ಸುಳ್ಳಾಡಲು ಸಾಧ್ಯವಿಲ್ಲಾ.

ಇಬ್ರಿ 6:18 ತೀತ 1:2



# ಒಂದು ವೇಳೆ ಯೇಸುವನ್ನು ನಿನ್ನ ಹೃದಯದಲ್ಲಿ ಬರಲು ಆಮಂತ್ರಿಸಿದ್ದರೆ ಆತನ ಆತ್ಮವು ತಕ್ಷಣ ನಿನ್ನ ಹೃದಯ ಮತ್ತು ಜೀವನದಲ್ಲಿ ಬರುತ್ತದೆ.

ಪ್ರಕಟಣೆ 3:20

ರೋಮಾ 8.9




ಯಾರಾದರೂ ಕರ್ತನಾದ ಯೇಸುವನ್ನು ಅಂಗೀಕರಿಸಿದರೆ ಅವರು ದೇವರ ಮಕ್ಕಳಾಗುವರು ಅವರಿಗೆ ನಿತ್ಯಜೀವ ದೊರೆಯುವದು. ಏಕೆಂದರೆ ಆ ನಿತ್ಯಜೀವವು ಯೇಸುವಿನಲ್ಲಿ ಇದೆ. ಯೋಹಾನ 1:12-13; 1 ಯೋಹಾನ 5:11-13.

ಯೇಸು ನುಡಿದದ್ದು: ಒಬ್ಬನು ಹೊಸದಾಗಿ ಹುಟ್ಟದಿದ್ದರೆ (ದೇವರ ಆತ್ಮದಿಂದ - ಆತ್ಮಿಕ ಜನ್ಮ) ಅವನು ಖಂಡಿತವಾಗಿ ದೇವರ ರಾಜ್ಯವನ್ನು (ಸ್ವರ್ಗ) ಸೇರಲಾರನು. ಯೋಹಾನ 3:3-8; ಯೋಹಾನ 4:24

# ಆತ್ಮಿಕವಾಗಿ ಅಭಿವೃದ್ಧಿಗೊಳ್ಳಿರಿ

2 ಪೇತ್ರ 3:18



ಯಾವಾಗಲೂ ಪ್ರಾರ್ಥಿಸಿರಿ

1 ಥೆಸಲೋನಿಕ 5:17



ಪ್ರತಿದಿನ ಸತ್ಯವೇದವನ್ನು ಓದಿರಿ

ಕೊಲೊಸ್ಸೆ 3:16

ಮತ್ತಾಯ 4:4


1 ಪೇತ್ರ 2:2

2 ಕೊರಿಂಥ 4:16

ಇಬ್ರಿ 1:1,2

2 ತಿಮೊಥೆ 3:16, 17

ಪೇತ್ರ 1:20, 21



ಕ್ರಮವಾಗಿ ದೇವರ ಸಭೆಗೆ ಹೋಗಿರಿ

ಇಬ್ರಿ 10:25



# ಕ್ರಿಸ್ತನಿಗಾಗಿ ಜೀವಿಸುವದು ಅಂದರೆ:






ಪವಿತ್ರಾತ್ಮದ ಸಹಾಯದಿಂದ
ದೇವರ ವಾಕ್ಯಗಳಿಗೆ ವಿಧೇಯರಾಗಿರಿ.

ದೀಕ್ಷಾಸ್ನಾನಹೊಂದಿರಿ

ಮತ್ತಾಯ 28:18-20

ಪವಿತ್ರಾತ್ಮಭರಿತರಾಗಿರಿ

ಎಫೆಸೆ 5:18

ಇತರರಿಗೆ ಯೇಸುವಿನ ಬಗ್ಗೆ ಹೇಳಿ

ಅ.ಕೃತ್ಯ 1:8

## ದೇವರು ಬೆಳಕಿನಲ್ಲಿರುವಂತೆಯೇ **ಬೆಳಕಿನಲ್ಲಿ ನಡೆಯಿರಿ**

ಪ್ರತಿದಿನ ಪವಿತ್ರ ದೇವರೊಂದಿಗೆ ಅನ್ಯೋನ್ಯತೆಯಲ್ಲಿ ಜೀವಿಸು 1 ಯೋಹಾನ 1:7

**ದೇವರು ಬೆಳಕಾಗಿದ್ದಾನೆ** (ಪವಿತ್ರ) ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ (ಪಾಪ) ದೇವರ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ (ಪಾಪದಲ್ಲಿ ಜೀವಿಸಿದರೆ) ನಡೆದರೆ ನಾವು ಸುಳ್ಳಾಡುವವರಾಗಿದ್ದೇವೆ. ದೇವರ ವಾಕ್ಯದಂತೆ ಸತ್ಯದಲ್ಲಿ ಜೀವಿಸುತ್ತಿಲ್ಲ. 1 ಯೋಹಾನ 1:5-7; 1 ಪೇತ್ರ 1:15:16



ಪಾಪವು ಯಾವಾಗಲೂ ಪವಿತ್ರ ದೇವರೊಂದಿಗಿರುವ ನಮ್ಮ ಅನ್ಯೋನ್ಯತೆಯನ್ನು ಮುರಿಯುತ್ತದೆ. ನಮ್ಮ ಪಾಪಗಳನ್ನು ಒಪ್ಪಿಕೊಂಡು, ನಮ್ಮ ಪಾಪಗಳಿಂದ ತಿರುಗಿಕೊಂಡರೆ ದೇವರು ನಮ್ಮನ್ನು ಕ್ಷಮಿಸುತ್ತಾನೆ. ದೇವರ ಕುಮಾರನಾದ ಯೇಸುವಿನ ರಕ್ತವು ನಮ್ಮನ್ನು ಸಕಲ ಪಾಪಗಳಿಂದ ಶುದ್ಧಿಮಾಡುತ್ತದೆ. ಪುನಃ ದೇವರೊಂದಿಗೆ ಅನ್ಯೋನ್ಯತೆ ಸ್ಥಾಪಿತವಾಗುತ್ತದೆ. 1 ಯೋಹಾನ 1:5-7,9



**ಬೆಳಕಿನಲ್ಲಿ** ನಡೆಯಲು (ಪವಿತ್ರ ಜೀವನ ನಡೆಸಲು) ದೇವರು ನಮಗೆ ಹೇಗೆ ಸಹಾಯ ಮಾಡುತ್ತಾನೆ. ದೇವರು ನಮಗೆ ಕೃಪೆಯನ್ನು ಧಾರಾಳವಾಗಿ ನೀಡಿ ಯೇಸು ಕ್ರಿಸ್ತನಲ್ಲಿರುವ ವಿಶ್ವಾಸದಿಂದ ಮೆಚ್ಚಿಕೆಯಾದ ಜೀವನ ನಡೆಸಲು ಸಹಾಯ ಮಾಡುತ್ತಾನೆ ಮತ್ತು ಆತನ ಆಜ್ಞೆಗಳಿಗೆ ವಿಧೇಯರಾಗಿರುವಂತೆ ಮಾಡುತ್ತಾನೆ. ಮನುಷ್ಯ ಪ್ರಯತ್ನದಿಂದ ದೇವರಿಗೆ ಮೆಚ್ಚಿಕೆಯಾದ ಜೀವನ ನಡೆಸಲು ಅಸಾಧ್ಯವಾಗಿದೆ.



### 1. ಪ್ರತಿದಿನದ ಜೀವನ

ಪ್ರತಿ ದಿನವೂ ಪವಿತ್ರ ದೇವರೊಂದಿಗೆ ಅನ್ಯೋನ್ಯತೆಯಿಂದ ಇದ್ದು, ಪ್ರಾರ್ಥನೆಯಲ್ಲಿ ನಿರತರಾಗಿ ಸತ್ಯವೇದವನ್ನು ಓದುತ್ತಾ ಪವಿತ್ರಾತ್ಮನ ಸಹಾಯದಿಂದ ದೇವರ ವಾಕ್ಯಕ್ಕೆ ವಿಧೇಯರಾಗಿರಬೇಕು. 1 ಪೇತ್ರ 1:22

### 2. ಒಂದುವೇಳೆ

ಯೇಸುವನ್ನು ನಮ್ಮ ರಕ್ಷಕನೆಂದು ನಂಬಿದ ನಂತರವೂ ಒಂದು ವೇಳೆ ನಾವು ಪಾಪ ಮಾಡಿದರೆ ತಕ್ಷಣ ಯೇಸುವಿನಲ್ಲಿ ಪಾಪಗಳ ಅರಿಕೆಮಾಡಿ ತಿರುಗಿ ಕ್ಷಮೆ ಕೇಳಿ ಆ ಪಾಪಗಳಿಂದ ತಿರುಗಬೇಕು ಹಾಗು ಆ ಪಾಪಮಾಡದಂತೆ ಯೇಸುವಿನ ಸಹಾಯ ಕೇಳಬೇಕು.

### 3. ಅಲ್ಲದೆ

ನಮ್ಮ ಮತ್ತು ಇತರರ ಮಧ್ಯ ತಪ್ಪಿ ಹೋದ ಅನ್ಯೋನ್ಯತೆಯನ್ನು ಸರಿಪಡಿಸಿಕೊಳ್ಳಬೇಕು. ಇದರಿಂದ ದೇವರೊಂದಿಗೆ ಇರುವ ನಮ್ಮ ಅನ್ಯೋನ್ಯತೆಗೆ ಅಡ್ಡಿಯಾಗಬಾರದು.

**ಯೇಸು ಹೇಳಿದ್ದು : ನಾನೇ ಲೋಕಕ್ಕೆ ಬೆಳಕು** ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ (ಪಾಪದಲ್ಲಿ ಜೀವಿಸುವುದು) ನಡೆಯದೆ ಜೀವಕೊಡುವ ಬೆಳಕನ್ನು ಹೊಂದುವನು. ಯೋಹಾನ 8:12 ನೀವು ಬೆಳಕಿನಲ್ಲಿ (ಯೇಸುವಿನಲ್ಲಿ) ವಿಶ್ವಾಸವಿಟ್ಟರೆ, **ನೀವು ಕೂಡ ಬೆಳಕಿನ ಮಕ್ಕಳಾಗುವಿರಿ.** ಯೋಹಾನ 12:36

**ನೀವು ಲೋಕಕ್ಕೆ ಬೆಳಕಾಗಿದ್ದೀರಿ.** ಮತ್ತಾಯ 5:14

**ದೇವರ ಬೆಳಕಿನ ಮಕ್ಕಳಂತೆ ನಡೆಯಿರಿ (ಜೀವಿಸಿ)!** ಎಫೆಸ 5:8

# ಸ್ವರ್ಗದ ದಾರಿ

## ಈ ಪುಸ್ತಕ ಬಳಸುವ ವಿಧಾನ

1. ಪುಸ್ತಕದ ಪುನರಾವಲೋಕನ

ಈ ಪುಸ್ತಕದಿಂದ ಸುವಾರ್ತೆಯನ್ನು ಐದು ಬಣ್ಣಗಳ ಮೂಲಕ ಪ್ರಕಟಮಾಡಲಾಗಿದೆ, ಪ್ರತಿಯೊಂದು ಬಣ್ಣವು ಸುವಾರ್ತೆಯ ಒಂದು ಭಾಗವನ್ನು ತಿಳಿಸುತ್ತದೆ.

3ನೇಯ ಪುಟದಲ್ಲಿಯ ರೂಪ ರೇಖೆಯು ಉಪದೇಶಕರಿಗೆ ಮತ್ತು ಕಥನಕಾರರಿಗೆ ಸಹಾಯ ಮಾಡುತ್ತದೆ.

**ಹಳದಿ ಪಟ್ಟಿಯು:** ಸ್ವರ್ಗವನ್ನು ಮತ್ತು ದೇವರ ಪ್ರೀತಿಯನ್ನು ಸೂಚಿಸುತ್ತದೆ ಪುಟ 4 ಮತ್ತು 5

**ಕಪ್ಪು ಪಟ್ಟಿಯು:** ಪಾಪ ಮತ್ತು ಅದರಿಂದಾಗುವ ಶಿಕ್ಷೆಯನ್ನು ತಿಳಿಸುತ್ತದೆ ಪುಟ 6 ಮತ್ತು 7

**ಕೆಂಪು ಪಟ್ಟಿಯು:** ನಮ್ಮ ಪಾಪಗಳ ನಿಮಿತ್ತ ಕ್ರಿಸ್ತನ ಮರಣ ಮತ್ತು ಆತನ ಪುನರುತ್ಥಾನವನ್ನು ಸೂಚಿಸುತ್ತದೆ. ಪುಟ 8 ಮತ್ತು 9

ಪಾಪವನ್ನು ಅರಿಕೆಮಾಡಿ ಅದನ್ನು ತ್ಯಜಿಸುವವರಿಗೆ ಕ್ಷಮೆ ಪ್ರಾಪ್ತವಾಗುವದು ಎಂಬುದನ್ನೂ ಸೂಚಿಸುತ್ತದೆ ಪುಟ 10 ಮತ್ತು 11

**ಬಿಳಿ ಪಟ್ಟಿಯು:** ಶುದ್ಧೀಕರಣ ಮತ್ತು ಯೇಸುವನ್ನು ಕರ್ತನೆಂದು ಯಾರು ಅಂಗೀಕರಿಸುತ್ತಾರೋ ಅವರಿಗೆ ನಿತ್ಯಜೀವ ದೊರೆಯುವದನ್ನು ಸೂಚಿಸುತ್ತದೆ. ಪುಟ 12 ಮತ್ತು 13

**ಹಸಿರು ಪಟ್ಟಿಯು:** ಆತ್ಮೀಯ ಜೀವನದಲ್ಲಿ ವೃದ್ಧಿಹೊಂದುವದನ್ನೂ ಯೇಸುವಿನಲ್ಲಿ ಜೀವಿಸುವದು (ಪುಟ 14,15) ಪ್ರತಿದಿನ ಬೆಳಕಿನಲ್ಲಿ ನಡೆಯುತ್ತಾ ಮಾನವ ಹಾಗು ದೇವರೊಂದಿಗೆ ಅನ್ಯೋನ್ಯತೆಯನ್ನು ಸ್ಥಾಪಿಸುವದನ್ನು ಸೂಚಿಸುತ್ತದ (ಪುಟ 16,17).

ಸುವಾರ್ತೆಯನ್ನು ಪ್ರಕಟಿಸಿದ ನಂತರ (ಪುಟ 4ರಿಂದ 13ರವರೆಗೆ) ಮೂರು ರೀತಿಯ ವಿಮರ್ಶೆಯನ್ನು ಇಲ್ಲಿ ಕಾಣುತ್ತೇವೆ, ಇದರ ಮುಖ್ಯ ಉದ್ದೇಶ ಸುವಾರ್ತೆಯ ವಿಷಯವನ್ನು ಸರಳವಾಗಿ ಪ್ರಕಟಮಾಡಿ ಇದನ್ನು ಕೇಳುವವರು ಸುವಾರ್ತೆಯನ್ನು ಸುಲಭವಾಗಿ ತಿಳಿಯಲು ಸಾಧ್ಯವಾಗುತ್ತದೆ.

1 ಪ್ರಥಮ ಪರಿಶೀಲನೆ: ಮುಖ ಪುಟ

2 ದ್ವಿತಿಯ ಪರಿಶೀಲನೆ: ಹಿಂದಿನ ಪುಟ

3 ತೃತೀಯ ಪರಿಶೀಲನೆ ಪುಟ-3 ಉಪದೇಶಕರಿಗೆ ಪುಸ್ತಕದ ಮುಖ್ಯಾಂಶಗಳನ್ನು ತಿಳಿಸಲು ಸಹಾಯ ಮಾಡುತ್ತವೆ.

2. ಯಾವ ರೀತಿಯಿಂದ "ಸ್ವರ್ಗದ ದಾರಿ" ಪುಸ್ತಕವನ್ನು ಉಪಯೋಗಿಸಬೇಕು ಎಂಬ ನಿರ್ದೇಶನಗಳು

ಮುಖ್ಯಾಂಶಗಳನ್ನು ತಿಳಿಸುತ್ತಾ ಸ್ವರ್ಗದ ದಾರಿ ಪುಸ್ತಕವನ್ನು ಪ್ರಾರಂಭ ಮಾಡಿದ ಮೇಲೆ ಪುಟ 4ಕ್ಕೆ ತಿರುಗಿ ಅದರಲ್ಲಿಯ ಸಂದೇಶವನ್ನು ತಿಳಿಸಿ.

ಪುಟ 6 ಮತ್ತು 7 ಸಾದರ ಪಡಿಸಿರಿ, ''ಎಲ್ಲರು ಪಾಪ ಮಾಡಿ ದೇವರ ಆಜ್ಞೆಗೆ ಅವಿಧೇಯರಾಗಿದ್ದಾರೆ. ಪಾಪಕ್ಕೆ ಬರುವ ಶಿಕ್ಷೆ ಬೆಂಕಿಯ ಕೆರೆಯೇ ಇಲ್ಲಿ ಅನಂತಯಾತನೆ ಇರುತ್ತದೆ.

ಪುಟ 8 ಮತ್ತು 9 ಸಾದರ ಪಡಿಸಿರಿ, ''ದೇವರು ನಾವು ಯಾತನೆಪಡುವದನ್ನು ಇಚ್ಛಿಸುವದಿಲ್ಲಾ. ದೇವರು ಯೇಸುವನ್ನು ನಮ್ಮ ಪಾಪಗಳ ನಿಮಿತ್ತ ಸಾಯಲು ಕಳುಹಿಸಿದನು. ಯೇಸುವಿನಲ್ಲಿ ಪಾಪವಿಲ್ಲ, ನಾವು ಪಾಪಿಗಳಾದ್ದರಿಂದ ಪಾಪಗಳ ನಿಮಿತ್ತ ಶಿಕ್ಷೆಯನ್ನು ಅನುಭವಿಸುವದು ಸಹಜ. ಸ್ವಇಚ್ಛೆಯಿಂದ ಯೇಸು ನಮ್ಮ ಪಾಪಗಳಿಗೆ ಬರಬೇಕಾದ ಶಿಕ್ಷೆಯನ್ನು ತನ್ನ ಮೇಲೆ ತೆಗೆದುಕೊಂಡನು. ಆಮೇಲೆ ಕ್ರಿಸ್ತನ ಮರಣ ಮತ್ತು ಪುನರುತ್ಥಾನ ಪ್ರಕಟಮಾಡಿ.

ಮನುಷ್ಯನ ಸಮಸ್ಯೆ:- ಒಂದು ಪಾಪಮಯವಾದ ಹೃದಯ ಒಳ್ಳೆಯದನ್ನು ಮಾಡುತ್ತಾ ನಾವು ಸತತವಾಗಿ ಒಳ್ಳೆಯದನ್ನು ಇತರರಿಗೆ ಮಾಡುತ್ತಾ, ನಾವು ಧಾರ್ಮಿಕವಾಗಿ ಜೀವಿಸುತ್ತಾ ಪ್ರತಿವಾರವು ದೇವರ ಸಭೆಗೆ ಹೋಗುತ್ತಾ ನಾವು ಒಂದೇ ಒಂದು ಪಾಪವನ್ನು ತೆಗೆಯಲು ಸಾಧ್ಯವಿಲ್ಲಾ. ನಮ್ಮ ಪ್ರಯತ್ನದಿಂದ ನಮ್ಮನ್ನು ನಾವು ರಕ್ಷಿಸಲು ಅಸಾಧ್ಯವಾಗಿದೆ. ಈ ಕಾರಣದಿಂದ ನಮ್ಮ ಪಾಪಗಳಿಂದ ರಕ್ಷಿಸಲು ಕರ್ತನಾದ ಯೇಸು ಸ್ವಾಮಿಯ ಅವಶ್ಯಕತೆ ನಮಗೆ ಇದೆ.

ಪುಟ 10 ಮತ್ತು 11 ನಾವು ಸ್ವರ್ಗಕ್ಕೆ ಹೋಗಬೇಕಾದರೆ ದೇವರ ಆಜ್ಞೆಯಂತೆ ನಡೆಯಬೇಕು. ನಾವು ಮಾನಸಾಂತರ ಪಡಬೇಕು ಎಂದು ಯೇಸು ಹೇಳಿದನು. ಪಶ್ಚಾತ್ತಾಪ ಪಡದಿದ್ದರೆ ನಾವು ನಾಶವಾಗುತ್ತೇವೆ. (ಬೆಂಕಿಯ ಕೆರಗೆ ಹೋಗುತ್ತೇವೆ) ಲೂಕ 13:3 5. ಪಶ್ಚಾತಾಪಪಡು ಅಂದರೆ ಪಾಪಗಳ ಅರಿಕೆ ಮಾಡುವದು ಸ್ವಇಚ್ಛೆಯಿಂದ ಪಾಪ ಮಾಡುವದರಿಂದ ತಿರುಗಿದನಂತರ ದೇವರ ಕಡೆಗೆ ತಿರುಗಬೇಕು. ಆಗ ನಮ್ಮ ಪಾಪಗಳು ಕ್ಷಮಿಸಲ್ಪಡುವವು. ನಮ್ಮ ಹೃದಯವು ಕ್ರಿಸ್ತನ ರಕ್ತದಿಂದ ಶುದ್ಧ ಹೊಂದುವದು.

ಪುಟ 12 ಮತ್ತು 13 ಕರ್ತನಾದ ಯೇಸು ನಮ್ಮ ಹೃದಯದ ಬಾಗಿಲಿನಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದಾನೆ. ಆತನು ನಮ್ಮ ಹೃದಯದಲ್ಲಿ ಮತ್ತು ಜೀವನದಲ್ಲಿ ಬರಲು ಇಚ್ಛಿಸುತ್ತಾನೆ. ಒಂದು ವೇಳೆ ಯೇಸುವನ್ನು ನಮ್ಮ ಜೀವನದಲ್ಲಿ ಬರುವಂತೆ ಆಮಂತ್ರಣ ನೀಡಿದರೆ ಆತನ ಆತ್ಮ ತಕ್ಷಣ ನಮ್ಮ ಜೀವನದಲ್ಲಿ ಬಂದು ನಮಗೆ ನಿತ್ಯ ಜೀವ ಕೊಡುತ್ತದೆ. ಪ್ರಕಟಣೆ 3:20, 1 ಯೋಹಾನ 5:11, 12

ಪ್ರಥಮ ಪರಿಶೀಲನೆ - ಮುಖಪುಟ ಯಾವಾಗ ಯೇಸು ನಮ್ಮ ಹೃದಯದಲ್ಲಿ ಬಂದಾಗ ನಮ್ಮ ಪಾಪಗಳು ಕ್ಷಮಿಸಲ್ಪಡುತ್ತವೆ. ಆಮೇಲ ನಾವು ಈ ಲೋಕವನ್ನು ಬಿಟ್ಟ ಮೇಲ ಸ್ವರ್ಗಕ್ಕೆ ಹೋಗುತ್ತೇವೆ. ನಮಗೆ ಪೃಥ್ವಿ ಮತ್ತು ಸ್ವರ್ಗದ ನಡುವ ರಕ್ಷಣೆಯ ಸೇತುವೆಯ ಅವಶ್ಯಕತೆ ಇದೆ. ದೇವರು ಒಂದೇ ಒಂದು ದಾರಿಯನ್ನು ಪಾಪಿಗಳಿಗೆ ಸ್ವರ್ಗ ಸೇರು ಮಾಡಿದ್ದಾನೆ. ಕರ್ತನಾದ ಯೇಸುವನ್ನು ನಮ್ಮ ಪಾಪಗಳ ನಿಮಿತ್ತ ಮರಣ ಹೊಂದಲು ಕಳುಹಿಸಿದನು, ಆತನು ಪಾಪವನ್ನು ತೆಗೆದುಬಿಟ್ಟನು. ರಕ್ಷಣೆಯು ದೇವರ ವರವೇ ಅದು ಪುಣ್ಯಕ್ರಿಯೆಗಳಿಂದ ಉಂಟಾದುದಲ್ಲ. ಆದ್ದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ. ಎಫೆಸ 2:8 9

ಇಬ್ಬರು ಮನುಷ್ಯರು (ಹಳದಿ) ಯೇಸುವನ್ನು ನಂಬಿದರು ಮತ್ತು ಅವರು ತಮ್ಮ ಪಾಪಗಳನ್ನು ಅರಿಕೆ ಮಾಡಿದರು ಮತ್ತು ಅವರ ಪಾಪಗಳಿಗೆ ಕ್ಷಮೆ ಹೊಂದಿದರು ಅವರು ಯೇಸುವನ್ನು ತಮ್ಮ ಜೀವನದಲ್ಲಿ ಸ್ವೀಕರಿಸಿದರು ಅವರಲ್ಲಿ ನಿತ್ಯ ಜೀವ ಇರುವ್ವದರಿಂದ ರಕ್ಷಣೆಯ ಸೇತುವೆಯನ್ನು ದಾಟಲು ಸಮರ್ಥರಾಗಿದ್ದಾರೆ ಮತ್ತು ಸ್ವರ್ಗಕ್ಕೆ ಹೋಗುವ ದಾರಿಯಲ್ಲಿ ಇದ್ದಾರೆ.

ಪಾಪಿಯಾದ ಮನುಷ್ಯ (ಬೂದಿ) ಸ್ವರ್ಗಕ್ಕೆ ಪಾಪವನ್ನು ತೆಗೆದುಕೊಂಡು ಬರಲು ಸಾಧ್ಯವಿಲ್ಲ. ಸ್ವರ್ಗವು ಪವಿತ್ರವಾಗಿದೆ. ಯಾವ ಪಾಪವು ಸ್ವರ್ಗಕ್ಕೆ ಬರಲು ಸಾಧ್ಯವಿಲ್ಲ. ಪ್ರಕಟನೆ 21:27.



ಒಂದು ವೇಳೆ ಪಾಪಿಯಾದ ಮನುಷ್ಯನು ಕರ್ತನಾದ ಯೇಸುವನ್ನು ನಂಬಿ ಪಾಪಗಳನ್ನು ಅರಿಕೆ ಮಾಡಿದರೆ ಅವನ ಪಾಪಗಳು ಕ್ಷಮಿಸ್ಪಡುವವು ಮತ್ತು ರಕ್ಷಣೆಯ ಸೇತುವೆಯನ್ನು ದಾಟಿ ಸ್ವರ್ಗಕ್ಕೆ ಹೋಗುವ ದಾರಿಯಲ್ಲಿರುವನು ಅ.ಕೃ 16:31 ಒಂದು ವೇಳೆ ಪಾಪಿಯಾದ ಮನುಷ್ಯನು ರಕ್ಷಣೆಯ ಸೇತುವೆಯನ್ನು ದಾಟದಿದ್ದರೆ ಅವನ ಖಂಡಿತವಾಗಿ ಬೆಂಕಿಯ ಕೆರೆಗೆ ಹೋಗುವನು. ಸ್ವರ್ಗದಲ್ಲಿಯ ತಂದೆಯ ಹತ್ತಿರ ಹೋಗಲು ನಾನೇ ಒಂದು ಮಾರ್ಗವಾಗಿದ್ದೇನೆ. ಯೇಸು ಹೇಳಿದನು: ನನ್ನ ಹೊರತು ಬೇರೆ ಮಾರ್ಗವಿಲ್ಲಾ ಎಂದು ಯೋಹಾನ 14:6

ದ್ವಿತಿಯ ಪರಿಶೀಲನೆ - ಹಿಂದಿನ ಪುಟ ಮತ್ತಾಯ 7:13ದಲ್ಲಿ ಹೇಳಲ್ಪಟ್ಟಂತೆ ನಮಗೆ ನಮ್ಮ ಜೀವನದಲ್ಲಿ ಎರಡು ದಾರಿಗಳಿವೆ. ಇಕ್ಕಟ್ಟಾದ ದಾರಿ ನಮ್ಮನ್ನು ಸ್ವರ್ಗಕ್ಕೆ ತೆಗೆದುಕೊಂಡು ಹೋಗುತ್ತದೆ ಮತ್ತು ಅಗಲವಾದ ದಾರಿಯು ನಮ್ಮನ್ನು ಬೆಂಕಿಯ ಕೆರೆಗೆ ತೆಗೆದುಕೊಂಡು ಹೋಗುತ್ತದೆ. ಅಗಲವಾದ ದಾರಿಯಲ್ಲಿರುವ (ಬೂದಿ) ಮನುಷ್ಯರು ನಾಶಕ್ಕೆ ಹೋಗುವರು (ನರಕ).

ನಾವೆಲ್ಲ ಅಗಲವಾದ ದಾರಿಯಲ್ಲಿದ್ದೇವೆ. ಅದು ನಮ್ಮ ನಾಶಕ್ಕೆ ಕಾರಣವಾಗುತ್ತದೆ. ಏಕೆಂದರೆ ಎಲ್ಲರು ಪಾಪ ಮಾಡಿದ್ದಾರೆ. ರೋಮಾ 3:23 ಮತ್ತು ಪಾಪಕ್ಕೆ ಬರುವ ಶಿಕ್ಷೆ ಮರಣ (ಎರಡನೆಯ ಮರಣ). ಬೆಂಕಿಯ ಕೆರೆ (ನರಕ), ರೋಮ 6:23, ಪ್ರಕಟನೆ 21:8.

ಇಬ್ಬರು ಮನುಷ್ಯರು (ಹಳದಿ) ಇಕ್ಕಟ್ಟಾದ ಮಾರ್ಗವನ್ನು ಆರಿಸಿಕೊಂಡಿದ್ದಾರೆ. ಅವರು ಕರ್ತನಾದ ಯೇಸುವನ್ನು ನಂಬಿ ತಮ್ಮ ಪಾಪಗಳನ್ನು ಅರಿಕೆಮಾಡಿ ಕ್ಷಮೆಯನ್ನು ಹೊಂದಿದ್ದಾರೆ. 1 ಯೋಹಾನ 1:9

ಈ ಇಬ್ಬರು ಮನುಷ್ಯರು ಕರ್ತನಾದ ಯೇಸುವನ್ನು ತಮ್ಮ ಹೃದಯದಲ್ಲಿ ಬರಲು ಹೇಳಿದರು ಮತ್ತು ಅವರಲ್ಲಿ ನಿತ್ಯಜೀವ ಇದೆ. ಮಾತ್ರವಲ್ಲದೆ ಇಕ್ಕಟ್ಟಾದ ಬಾಗಿಲಿನಿಂದ ಸ್ವರ್ಗದ ಕಡೆಗೆ ಹೋಗುತ್ತಾ ಇದ್ದಾರೆ.

ನೀವು ಇಕ್ಕಟ್ಟಾದ ದಾರಿಯನ್ನು ಆರಿಸಿಕೊಂಡಿದ್ದೀರಾ? ಒಂದು ವೇಳೆ ಆ ವ್ಯಕ್ತಿಯು ಇಕ್ಕಟ್ಟಾದ ದಾರಿಯನ್ನು ಆರಿಸಿಕೊಂಡಿದ್ದರೆ ಅಥವಾ ಈ ಪ್ರಶ್ನೆಗೆ ಉತ್ತರ ನೀವು ಹೇಳಬೇಕು. ಒಂದು ವೇಳ ನಾವು ಇಕ್ಕಟ್ಟಾದ ಮಾರ್ಗವನ್ನು ಆರಿಸಿಕೊಂಡರೆ ಯೇಸುವಿನ ಜೊತೆ ಪ್ರಾರ್ಥನೆಯಲ್ಲಿ ಮಾತನಾಡಬೇಕು.

12ನೇಯ ಪುಟಕ್ಕೆ ತಿರುಗಿಸಿ ಅದರಲ್ಲಿಯ ಮಾದರಿ ಪ್ರಾರ್ಥನೆಯನ್ನು ಓದಿರಿ. ''ಕರ್ತನಾದ ಯೇಸುವೇ ನನ್ನ ಪಾಪಗಳನ್ನು ಕ್ಷಮಿಸು, ಹೃದಯದಲ್ಲಿರುವ ಪ್ರತಿಯೊಂದು ಪಾಪವನ್ನು ಶುದ್ಧಮಾಡು, ಕರ್ತನಾದ ಯೇಸುವೇ ನನ್ನ ಹೃದಯದಲ್ಲಿ ಬಂದು ನನ್ನ ಜೀವನವನ್ನು ನಿಯಂತ್ರಿಸು. ವಂದನೆಗಳು.''

ಎಂದು ಇದು ನಿಮ್ಮ ಹೃದಯದ ಇಚ್ಛೆಯನ್ನು ವ್ಯಕ್ತಪಡಿಸುತ್ತದೆಯೆ? ಇದಕ್ಕೆ ಅವರು 'ಹೌದು' ಎಂದು ಹೇಳಿದರೆ ಆಗ ಅವನನ್ನು ಯೇಸುವಿನ ಜೊತೆ ಪ್ರಾರ್ಥಿಸಲು ಹೇಳಿ. ತನ್ನ ಪಾಪಗಳನ್ನು ಕ್ಷಮಿಸುವಂತೆಯೂ ಯೇಸುವನ್ನು ತನ್ನ ಹೃದಯದಲ್ಲಿ ಬರುವಂತೆಯು ಕೇಳಬೇಕು. ಎಂದು ''ನೀವು ಈಗ ಪ್ರಾರ್ಥಿಸುತ್ತೀರಾ?. ಇದಕ್ಕೆ ಅವನು 'ಹೌದು' ಎಂದರೆ ಅವನನ್ನು ಪ್ರೋತ್ಸಾಹಿಸಿ. ಅವನು ಸ್ವಂತ ಶಬ್ದಗಳಿಂದ ಪ್ರಾರ್ಥನೆ ಮಾಡುತ್ತಾ ಯೇಸುವನ್ನು ತನ್ನ ಪಾಪಗಳನ್ನು ಕ್ಷಮಿಸುವಂತೆಯೂ ತನ್ನ ಹೃದಯದಲ್ಲಿ ಬರುವಂತೆಯೂ ಕೇಳುತ್ತಾ ಇರುವಾಗ ಅವನು ತನ್ನ ತಲೆಯನ್ನು ತಗ್ಗಿಸಬೇಕು. ಕಣ್ಣುಗಳನ್ನು ಮುಚ್ಚಬೇಕು. ರೋಮಾ 10:13

ಸಾಧ್ಯವಾದ ಮಟ್ಟಿಗೆ ಅವನು ಸ್ವಂತ ಶಬ್ದಗಳಿಂದ ಪ್ರಾರ್ಥನೆಯನ್ನು ಮಾಡಬೇಕು. ಒಂದು ವೇಳೆ ಅವನಿಗೆ ಸಹಾಯ ಬೇಕಾದರೆ ಮಾದರಿ ಪ್ರಾರ್ಥನೆಯನ್ನು ಪ್ರಾರ್ಥಿಸಬೇಕು, ಇದು ಅವನ ಹೃದಯದ ಇಚ್ಛೆಯನ್ನು ವ್ಯಕ್ತ ಪಡಿಸಿದರೆ ಆ ವ್ಯಕ್ತಿಯನ್ನು ಕೇಳಿ ''ನೀನು ಯಾರ ಜೊತೆ ಪ್ರಾರ್ಥನೆ ಮಾಡಿದ್ದೀ?'' ?ಈ ಪ್ರಶ್ನೆಗೆ ಅವನು ಏನು ಉತ್ತರ ನೀಡಬೇಕು ಎಂದು ತಿಳಿಯದೆ ಇರುವಾಗ, ಅವನು ನೀವು ಪ್ರಕಟ ಮಾಡಿದ ಸಂದೇಶವನ್ನು ಅರ್ಥಮಾಡಿಕೊಂಡಿಲ್ಲಾ.

ಆಗ ನೀವು ಪರಿಶೀಲನೆಯ ಒಂದು ಪುಟವನ್ನು ಉಪಯೋಗಿಸಿ ಅವರಿಗೆ ರಕ್ಷಣೆಯ ಮಾರ್ಗವನ್ನು ತಿಳಿಸಿರಿ. ಅವರಿಗೆ ತಾವು ಏನು ಮಾಡುತ್ತಿದ್ದೇವೆ ಎಂದು ತಿಳಿಯುವದು ತುಂಬಾ ಮುಖ್ಯ. ಸುಮ್ಮನೆ ಪ್ರಾರ್ಥನೆಯಲ್ಲಿ ನಿಮ್ಮ ಅನುಕರಣೆ ಮಾಡಬಾರದು. ಇದು ಮುಖ್ಯ. ತಾವು ರಕ್ಷಣೆ ಹೊಂದಲು ತಮ್ಮ ಹೃದಯದ ಇಚ್ಛೆಯನ್ನು ಯೇಸುವಿಗೆ ತಾವು ಪ್ರಕಟ ಮಾಡುವುದಾಗಿದೆ. ರೋಮಾ 10:13

ನೀವು ಆ ವ್ಯಕ್ತಿಯನ್ನು ಪ್ರಾರ್ಥನೆಯಲ್ಲಿ, ನಿಸ ನೀವು ಯೇಸುವಿಗೆ ಏನು ಕೇಳಿದಿರಿ? ಎಂದಾಗ ಇದಕ್ಕೆ ಉತ್ತರವಾಗಿ ಅವನು ಪ್ರಾರ್ಥನೆಯಲ್ಲಿ ಯೇಸುವಿಗೆ ತನ್ನ ಪಾಪಗಳನ್ನು ಕ್ಷಮಿಸುವಂತೆಯೂ ತನ್ನ ಹೃದಯದಲ್ಲಿ ಬರುವಂತೆಯೂ ಕೇಳಿದನು ಎಂದಾಗ ನೀವು ಆ ವ್ಯಕ್ತಿಯನ್ನು ರಕ್ಷಣೆಯ ನಿಶ್ಚಯಕ್ಕೆ ನಡೆಸುವದು ತುಂಬಾ ಮುಖ್ಯವಾಗಿದೆ. ಕೆಳಗಿನ ಪ್ರಶ್ನೆಗಳನ್ನು ಕೇಳುವ ಮೂಲಕ ಇದನ್ನು ಮಾಡಬಹುದು.

ಈಗ ಯೇಸು ಎಲ್ಲಿ ಇದ್ದಾನೆ?

ಈಗಲೂ ಹೃದಯದ ಬಾಗಿಲ ಬಳಿ ನಿಂತು ತಟ್ಟುತ್ತಾ ಇದ್ದಾನೋ? ಅಥವಾ ಆತನು ನಿಮ್ಮ ಹೃದಯದಲ್ಲಿ ಇದ್ದಾನೋ? ಇದಕ್ಕೆ ಅವನು ನನಗೆ ಗೊತ್ತಿಲ್ಲಾ ಎಂದು ಉತ್ತರ ನೀಡಿದರೆ, ದೇವರ ವಾಕ್ಯದ ಆಶ್ವಾಸನೆಯಿಂದ ಉತ್ತರ ನೀಡಿದರೆ ಯೇಸು ಅವರ ಹೃದಯದಲ್ಲಿ ಬಂದನು ಎಂದು ದೃಢವಾಗುವವರೆಗೆ ನೀವು ಅವನನ್ನು ಪ್ರಕಟನೆ 3:20ನ್ನು ಮತ್ತೆ ಮತ್ತೆ ಓದಲು ಕೇಳಬೇಕು.

ಸತ್ಯವೇದವು ದೇವರ ವಾಕ್ಯವೆಂತಲೂ ನಾವು ಅವರಿಗೆ ಇದನ್ನು ಸ್ಪಷ್ಟವಾಗಿ ನಾವು ಅದನ್ನು ಸಂಪೂರ್ಣವಾಗಿ ನಂಬುತ್ತೇವೆ ಎಂತಲೂ ಅವರಿಗೆ ಸ್ಪಷ್ಟ ಪಡಿಸಬೇಕು. ದೇವರಿಗೆ ಸುಳ್ಳಾಡಲು ಸಾಧ್ಯವಿಲ್ಲ. ತೀತ 1:2 ಇಬ್ರ 6:18

ಪಾಪ ಕ್ಷಮೆಯ ಬಗ್ಗೆ ನಾವು ಆ ವ್ಯಕ್ತಿಯನ್ನು ಪಾಪ ಕ್ಷಮೆ ಹೊಂದಿದಿ ಎಂಬ ಆಶ್ವಾಸನೆಗಾಗಿ ನಡೆಸಬೇಕು. 8ನೇಯ ಪುಟದಲ್ಲಿರುವ ಕಪ್ಪು ಹೃದಯ ಹಾಗು 11ನೇಯ ಪುಟದಲ್ಲಿರುವ ಶುದ್ಧವಾದ ಹೃದಯ ಕಡೆಗೆ ತಿರುಗಿ ನಂತರ ಅವನನ್ನು ಕೇಳಬೇಕು. ಈ ಎರಡರಲ್ಲಿ ನಿಮ್ಮ ಹೃದಯ ಯಾವ ಪ್ರಕಾರವಾಗಿ ಇದೆ. ಒಂದು ವೇಳೆ ಅವನು ಕಪ್ಪು ಹೃದಯದ ಕಡೆಗೆ ತೋರಿಸಿದರೆ ಆಗ ನೀವು ಮತ್ತೆ ಪಾಪಕ್ಷಮೆಯ ಬಗ್ಗೆ ತಿಳಿಸಬೇಕು. ಯಾರು ಪಾಪವನ್ನು ಅರಿಕೆ ಮಾಡುತ್ತಾರೋ ಅವರಿಗೆ ದೇವರು ಪಾಪ ಕ್ಷಮೆಯನ್ನು ನೀಡುತ್ತಾನೆ 1 ಯೋಹಾನ 1:9 ( ಇದರ ಕಡೆಗೆ ತಿರುಗಿ ಇದನ್ನು ಮತ್ತೆ ಓದಬೇಕು. ಎಲ್ಲಿಯವರೆಗೆ ಅವನು ನಂಬುವದೆಂದರೆ ದೇವರ ವಾಗ್ದಾನದಂತೆ ಅವನ ಪಾಪಗಳು ಕ್ಷಮಿಸಲ್ಪಟ್ಟವು) ಏಕೆಂದರೆ ಅವನು ಪಾಪಗಳನ್ನು ಅರಿಕೆ ಮಾಡಿದ್ದಾನೆ ಮತ್ತು ಯೇಸು ಅವರ ಪಾಪಗಳ ನಿಮಿತ್ತ ಸತ್ತನು.

ದೇವರು ವಾಗ್ದಾನ ಮಾಡಿದ್ದಾನೆ ಪುಟ 12 ಇಬ್ರ 13:5 ''ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ. ಎಂದಿಗೂ ತೊರೆಯುವದಿಲ್ಲ. ನಾವು ಆ ವ್ಯಕ್ತಿಗೆ ದೇವರ ವಾಗ್ದಾನದಂತೆ. ಯೇಸು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲಾ. ಎಂದಿಗೂ ತೊರೆಯುವದಿಲ್ಲಾ ಎಂದು.

ಪುಟ 14 15 ನಾವು ಸತ್ಯವೇದವನ್ನು ಪ್ರತಿದಿನ ಓದುತ್ತಾ ಆತ್ಮಿಕ ಆಶ್ವಾಸನೆ ನೀಡಬೇಕು ಜೀವನದಲ್ಲಿ ವೃದ್ಧಿ ಹೊಂದುತ್ತೇವೆ. ಮತ್ತಾಯ 1:18 ಇಲ್ಲಿಂದ ಪ್ರಾರಂಭ ಮಾಡಿ ಅಧ್ಯಾಯದಿಂದ ಅಧ್ಯಾಯವಾಗಿ ಓದಬೇಕು. ನೀನು ಓದುತ್ತಾ ಇರುವಾಗ ಮಧ್ಯದಲ್ಲಿ ತಪ್ಪಬಾರದು. ಹೊಸ ಒಡಂಬಡಿಕೆಯನ್ನು ಸಂಪೂರ್ಣವಾಗಿ ಓದಿದ ಮೇಲೆ ಹಳೇ ಒಡಂಬಡಿಕೆಯ ಆದಿಕಾಂಡದಿಂದ ಓದಲು ಪ್ರಾರಂಭ ಮಾಡಬೇಕು. ಹಳೆ ಒಡಂಬಡಿಕೆಯನ್ನು ಓದುತ್ತಾ ಇರುವಾಗ ನೀನು ಹೊಸ ಒಡಂಬಡಿಕೆಯನ್ನು ಸಹ ಅದೇ ಸಮಯದಲ್ಲಿ ಓದಬೇಕು. ಒಂದು ಅಧ್ಯಾಯ ಹಳೇ ಒಡಂಬಡಿಕೆ; ಒಂದು ಅಧ್ಯಾಯ ಹೊಸ ಒಡಂಬಡಿಕೆಯಿಂದ ಓದಬೇಕು. ಈ ಪ್ರಕಾರ ಸತ್ಯವೇದವನ್ನು



ಸಂಪೂರ್ಣವಾಗಿ ಓದಿ ಮುಗಿಸಬೇಕು. ಆಮೇಲೆ ಸತ್ಯವೇದವನ್ನು ಮತ್ತೇ ಮತ್ತೇ ಓದುತ್ತಾ ಇರಬೇಕು.

ಪ್ರತಿದಿನ ಪ್ರಾರ್ಥನೆಯಲ್ಲಿ ನಾವು ಕೃತಜ್ಞತಾಸ್ತುತಿ ಮಾಡಬೇಕು. ಮುಂಜಾನೆ ನಾವು ಎದ್ದ ಮೇಲೆ ನಾವು ಪಾಪ ಮಾಡದಂತೆ ಮತ್ತು ಕೇಡಿನಿಂದ ಕಾಪಾಡುವಂತೆ ದೇವರನ್ನು ಕೇಳಬೇಕು. ನಮ್ಮ ಜೀವನದಲ್ಲಿ ಬರುವ ತೊಂದರೆಗಳಿಂದ ಮತ್ತು ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಹಾಗು ಬರುವ ಶೋಧನೆಗಳ ಮೇಲೆ ಜಯ ಹೊಂದಲು ಸಹಾಯ ಕೇಳಬೇಕು. ನಾವು ರಕ್ಷಣೆ ಹೊಂದದ ಮಿತ್ರರು ಮತ್ತು ಸ್ವಂತ ಮನೆಯವರನ್ನು ದೇವರು ರಕ್ಷಣೆ ಹೊಂದುವಂತೆ ಮಾಡಬೇಕು ಎಂದೂ ಪ್ರಾರ್ಥಿಸಬೇಕು.

ದೇವರನ್ನು ಆರಾಧಿಸಲು ನಾವು ಸತತವಾಗಿ ದೇವರ ಸಭೆಗೆ ಹೋಗಬೇಕು. ಸತ್ಯವೇದದಲ್ಲಿಯ ಸತ್ಯವನ್ನು ಹೆಚ್ಚಾಗಿ ತಿಳಿಯಲು ಮತ್ತು ವಿಶ್ವಾಸಿಗಳ ಅನ್ಯೋನ್ಯತೆಗಾಗಿ. ಕ್ರಿಸ್ತನಿಗಾಗಿ ಜೀವಿಸುವದು ಅಂದರೆ ಪವಿತ್ರಾತ್ಮದ ಸಹಾಯದಿಂದ ದೇವರ ವಾಕ್ಯಗಳಿಗೆ ವಿಧೇಯರಾಗಿರಿ. ದೀಕ್ಷಾಸ್ನಾನ ಹೊಂದಿರಿ. ಮತ್ತಾಯ 28:18-20, ದೇವರ ಆಜ್ಞಾನುಸಾರವಾಗಿ ಪವಿತ್ರಾತ್ಮ ಭರಿತರಾಗಿರಿ. ಎಫೇಸ 5:18.

ಕರ್ತನಾದ ಯೇಸು ಕ್ರಿಸ್ತನಲ್ಲಿಯ ವಿಶ್ವಾಸದಿಂದ ಇತರರಿಗೆ ನಾವು ಸುಪ್ರೀತ ಸಂದೇಶವನ್ನು ಹೇಳಬೇಕು.

ಪುಟ 16 ಮತ್ತು 17. ದೇವರು ಬೆಳಕಾಗಿರುವಂತೆ ಬೆಳಕಿನಲ್ಲಿ ನಡೆಯಿರಿ. ದೇವರೊಂದಿಗೆ ಮತ್ತು ಸಹ ವಿಶ್ವಾಸಿಗಳ ಜೊತೆ ತಪ್ಪದೆ ಅನ್ಯೋನ್ಯತೆಯಲ್ಲಿರಿ. ಕತ್ತಲೆಯಲ್ಲಿ ನಡೆಯುವದು ಅಂದರೆ ಪಾಪದಲ್ಲಿ ಜೀವಿಸುತ್ತಾ ಇದ್ದೀರಿ. ಯಾವಾಗ ಪಾಪಗಳನ್ನು ಅರಿಕೆಮಾಡಿ ಮತ್ತು ಪ್ರತಿಯೊಂದು ಪಾಪದಿಂದ ತಿರುಗಿದಾಗ ನಾವು ಬೆಳಕಿನಲ್ಲಿ ನಡೆಯುವವರಾಗಿದ್ದೇವೆ.

ತೃತೀಯ ಪರಿಶೀಲನೆ:- ಪುಟ 3 ಈ ಕೇಂದ್ರದಲ್ಲಿ ನಾವು ಸತ್ಯದ ಸಾರಾಂಶವನ್ನು ಪ್ರಕಟಮಾಡುತ್ತಾ ಇದ್ದೇವೆ

ಹಳದಿ ಪಟ್ಟಿಯು: 3ನೇಯ ಪುಟ ಈ ಪುಸ್ತಕವು ದೇವರ ಪ್ರೀತಿಯ ಬಗ್ಗೆ ಹೇಳುತ್ತದೆ.

ದೇವರು ನಮಗಾಗಿ ಸ್ವರ್ಗವನ್ನು ಸಿದ್ಧಪಡಿಸಿದ್ದಾನೆ. ಇದು ಒಂದು ಪವಿತ್ರ ಹಾಗು ಸಂತೋಷವಾದ ಸ್ಥಾನ

ಕಪ್ಪು ಪಟ್ಟಿಯು:- ನಾವೆಲ್ಲ ಪಾಪಮಾಡಿದ್ದರಿಂದ ದೇವರ ಪವಿತ್ರ ಸ್ವರ್ಗವನ್ನು ಪ್ರವೇಶಿಸಲು ಸಾಧ್ಯವಿಲ್ಲ. ನಾವೆಲ್ಲ ಬೆಂಕಿಯ ಕೆರೆಯ ಕಡೆಗೆ ( ನರಕ ) ಹೋಗುತ್ತಾ ಇದ್ದೇವೆ.

ಕೆಂಪು ಪಟ್ಟಿಯು:- ಯೇಸು ನಮಗಾಗಿ ಸತ್ತ ಕಾರಣದಿಂದ ಒಂದು ವೇಳೆ ನಾವು ಆತನಲ್ಲಿ ವಿಶ್ವಾಸವಿಟ್ಟು ಮತ್ತು ಪಾಪಗಳ ಅರಿಕೆ ಮಾಡಿ ಮತ್ತು ಸ್ವಇಚ್ಛೆಯಿಂದ ಪಾಪಗಳಿಂದ ತಿರುಗಿದಾಗ ಆತನು ನಮ್ಮನ್ನು ಕ್ಷಮಿಸುತ್ತಾನೆ ಮತ್ತು ನಮ್ಮನ್ನು ಪಾಪಗಳಿಂದ ಶುದ್ಧ ಮಾಡುತ್ತಾನೆ.


ಬಿಳಿ ಪಟ್ಟಿಯು:- ಕರ್ತನಾದ ಯೇಸುವನ್ನು ನಮ್ಮ ಜೀವನದಲ್ಲಿ ಸ್ವೀಕರಿಸುವದರಿಂದ ನಾವು ದೇವರ ವರವಾದ ನಿತ್ಯಜೀವವನ್ನು ಪಡೆಯುತ್ತೇವೆ ಮತ್ತು ಪರಿಶುದ್ಧರಾಗುತ್ತೇವೆ.

ಹಸಿರು ಪಟ್ಟಿಯು:- ಸತ್ಯವೇದವನ್ನು ಓದುತ್ತಾ ಆತ್ಮಿಕ ಜೀವಿತದಲ್ಲಿ ಅಭಿವೃದ್ಧಿಗೊಳ್ಳಿರಿ, ಯಾವಾಗಲು ಪ್ರಾರ್ಥಿಸಿರಿ. ದೇವರ ಸಭೆಗೆ ಹೋಗಿರಿ. ದೇವರ ವಾಕ್ಯಗಳಿಗೆ ವಿಧೇಯರಾಗಿರಿ, ಇತರರಿಗೆ ಯೇಸುವಿನ ಮೇಲೆ ವಿಶ್ವಾಸವಿಟ್ಟಾಗ ದೇವರ ವರವಾದ ನಿತ್ಯಜೀವ ದೊರೆಯುತ್ತದೆ ಎಂದು ಹೇಳಿರಿ.

ನೀನು ಕ್ರಿಸ್ತನ ಕಡೆಗೆ ನಡೆಸಿದ ವ್ಯಕ್ತಿಯನ್ನು ಭೇಟಿ ಮಾಡಲು ತಪ್ಪಬಾರದು. ಎಲ್ಲಿಯವರೆಗೆ ಅವನು ನಂಬಿಕೆಯಲ್ಲಿ ದೃಢವಾಗುವದಿಲ್ಲಾ. ನೀನು ವೈಯಕ್ತಿಕವಾಗಿ ವಾರಕ್ಕೆ ಒಂದು ಸಲ ಅಥವಾ ದೂರವಾಣಿಯಿಂದ ಅಥವಾ ಪತ್ರದ ಮುಖಾಂತರ ಅವನನ್ನು ಸಂಪರ್ಕಿಸಬೇಕು ಮತ್ತೊಬ್ಬರು ಕೂಡಾ ಅವನನ್ನು ನಡೆಸಲು ಮುಂದೆ ಬರಬೇಕು.

''ಸ್ವರ್ಗದ ದಾರಿ'' ಈ ಪುಸ್ತಕವನ್ನು ಉಪಯೋಗಮಾಡಿ ಅನೇಕರನ್ನು ಕ್ರಿಸ್ತನ ಕಡೆಗೆ ನಡೆಸಿದ ನಿಮ್ಮನ್ನು ದೇವರು ಅಪರಿಮಿತವಾಗಿ ಆಶೀರ್ವದಿಸಲಿ

- Malaysia Faith Mission


ಕೆಳಗೆ ಎರಡು ಮಾರ್ಗಗಳಿವೆ
ಒಂದು ಅಗಲವಾದ ಮಾರ್ಗ ಮತ್ತೊಂದು ಇಕ್ಕಟ್ಟಾದ ಮಾರ್ಗ ಮತ್ತಾಯ 7:13,14
ನಾವೆಲ್ಲ ಅಗಲವಾದ ಮಾರ್ಗದಲ್ಲಿ ಇದ್ದೇವೆ ಇದು ನಾಶಕಕ್ಕೆ ಕೊಂಡೊಯ್ಯುತ್ತದೆ ರೋಮಾ 3:23, 6:23
ಸ್ವರ್ಗ
ಪಾಪ
ಪಾಪ
ಇಕ್ಕಟ್ಟಾದ ದಾರಿಯು ಜೀವಿತಕ್ಕೆ ನಡೆಸುತ್ತದೆ
ಕರ್ತನಾದ ಯೇಸು ನಿನ್ನ ಪಾಪಗಳನ್ನು ಕ್ಷಮಿಸಿ ನಿನ್ನ ಹೃದಯ ಮತ್ತು ಜೀವಿತದಲ್ಲಿ ಬರುವ ಮುಖಾಂತರ ಈ ಇಕ್ಕಟ್ಟಾದ ದಾರಿಯಲ್ಲಿ ನಡೆಯಬಹುದು.
ಪಾಪ
ಪಾಪ
ಪಾಪ
ಯೇಸು ಹೇಳಿದನು. ನಾನೇ ತಂದೆಯ ಬಳಿಗೆ(ಸ್ವರ್ಗದಲ್ಲಿ) ಬರಲು ಒಂದೇ ಮಾರ್ಗವಾಗಿದ್ದೇನೆ. ನನ್ನ ಮೂಲಕವಾಗಿ ಹೊರತು ಬೇರೆ ಮಾರ್ಗವಿಲ್ಲ. ಯೋಹಾನ 14:6
ನೀವು ಇಕ್ಕಟ್ಟಾದ ಮಾರ್ಗವನ್ನು ಆರಿಸಿಕೊಂಡಿದ್ದೀರಾ.
ಇದು ಜೀವಿತಕ್ಕೆ ನಡೆಸುತ್ತದೆ (ಸ್ವರ್ಗ)?
(12 ಪುಟದಲ್ಲಿರುವ ಮಾದರಿ ಪ್ರಾರ್ಥನೆ ಕಡೆಗೆ ತಿರುಗಿ)
ನರಕ